ಈ) ಪ್ರಸಕ್ತ ಹಣಕಾಸು ವರ್ಷದ ಮೊದಲ 2 ತಿಂಗಳ ಅವಧಿಯಲ್ಲಿ ಈ ಬಾಬ್ತಿನಲ್ಲಿ ಸಂಗ್ರಹಿಸಲಾಗಿರುವ ಹಣ ಎಷ್ಟು;

ಉ) ರಾಜ್ಯ ಸರ್ಕಾರ ಪೆಟ್ರೋಲ್ ಹಾಗೂ ಡೀಸಲ್ ಬೆಲೆ ಇಳಿಸಿ, ಬಳಕೆದಾರರಿಗೆ ನೆರವಾಗಲು ಮಾರಾಟ ದರ ಕಡಿಮೆ ಮಾಡುವುದೇ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ರಾಜ್ಯದಲ್ಲಿ ಪ್ರಸ್ತುತ ಪೆಟ್ರೋಲ್ ಶೆ.28ರ ಮಾರಾಟ ತೆರಿಗೆ ಹಾಗೂ ಡೀಸಲ್ ಮೇಲೆ ಶೇ.20ರಷ್ಟು ಮಾರಾಟ ತೆರಿಗೆ ವಿಧಿಸಿದೆ.

ಆ) ನೆರೆ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳಿಗೆ ಹೋಲಿಸಿದಲ್ಲಿ, ರಾಜ್ಯದಲ್ಲಿ ಪೆಟ್ರೋಲ್ ಮೇಲೆ ವಿಧಿಸಲಾಗುತ್ತಿರುವ ಶೆ.28ರ ಮಾರಾಟ ತೆರಿಗೆ ಹೆಚ್ಚಿನದಾಗಿರುತ್ತದೆ. ಮತ್ತು ಡೀಸಲ್ ಮೇಲೆ ವಿಧಿಸಲಾಗುತ್ತಿರುವ ಶೇ.20ರ ಮಾರಾಟ ತೆರಿಗೆ ಅತಿ ಕಡಿಮೆಯದಾಗಿರುತ್ತದೆ.

ಇ) 2005–06ನೇ ಸಾಲಿನಲ್ಲಿ ರಾಜ್ಯದಲ್ಲಿ ಮಾರಾಟವಾದ ಡೀಸಲ್ ಮತ್ತು ವೈಮಾನಿಕ ಇಂಧನ ಸೇರಿದಂತೆ ಪೆಟ್ರೋಲ್ ಮೇಲಿನ ಮಾರಾಟ ತೆರಿಗೆಯಿಂದ ಸುಮಾರು 2490.09 ಕೋಟಿ ರೂಪಾಯಿಗಳ ತೆರಿಗೆ ಸಂಗ್ರಹಣೆಯಾಗಿರುತ್ತದೆ.

ಈ) 2006ರ ಏಪ್ರಿಲ್ ಮತ್ತು ಮೇ ತಿಂಗಳ ಅವಧಿಯಲ್ಲಿ ರಾಜ್ಯದಲ್ಲಿ ಮಾರಾಟವಾದ ಡೀಸಲ್ ಮತ್ತು ವೈಮಾನಿಕ ಇಂಧನ ಸೇರಿದಂತೆ ಪೆಟ್ರೋಲ್ ಮೇಲಿನ ಮಾರಾಟ ತೆರಿಗೆಯಿಂದ ಸುಮಾರು 456.57 ಕೋಟಿ ರೂಪಾಯಿಗಳ ತೆರಿಗೆ ಸಂಗ್ರಹಣೆಯಾಗಿರುತ್ತದೆ.

ಉ) – ಇಲ್ಲ –

643 (579) ಶ್ರೀ ಡಿ.ಆರ್. ಪಾಟೀಲ್ (ಗದಗ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೂಮಿ ಯೋಜನೆಯ ತ್ವರಿತ ಸೇವೆ ತಾಲ್ಲೂಕು ಮಟ್ಟದ ರೈತರಿಗೆ ಮಾತ್ರ ದೊರೆಯುತ್ತಿದ್ದು ಇದನ್ನು ಗ್ರಾಮೀಣ ಮಟ್ಟಕ್ಕೆ ವಿಸ್ತರಿಸಲು ಸರ್ಕಾರದ ಯೋಜನೆಗಳೇನು; ಇದಕ್ಕೆ ಬೇಕಾಗುವ ಕಾಲಾವಧಿ ಎಷ್ಟು;

ಆ) ಹಾಗಿದ್ದಲ್ಲಿ, ಗಣಕಯಮತ್ರ ಸೌಲಭ್ಯ ಹೊಂದಿರುವ ಸಂಘಸಂಸ್ಥೆಗಳು ಭೂಮಿ ಯೋಜನೆಯ ಸೌಲಭ್ಯವನ್ನು ರೈತರಿಗೆ ಒದಗಿಸಲು ಮುಂದೆ ಬಂದಲ್ಲಿ ಅವರಿಗೆ ಸರ್ಕಾರ ಅವಕಾಶ ನೀಡುವುದೇ;

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಸಾರ್ವಜನಿಕ ಖಾಸಗಿ ಸಹಭಾಗಿತ್ವದೊಂದಿಗೆ (PPP) "ಗ್ರಾಮೀಣ ಗಣಕೀಕೃತ ಸೇವೆಗಳು" ಯೋಜನೆಯಡಿ ಟೆಲಿಸೆಂಟರ್‌ಗಳನ್ನು ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದ್ದು, ಗಣಕೀಕೃತ ಪಹಣಿಗಳನ್ನು ವಿತರಿಸುವುದು ಈ ಟೆಲಿ ಸೆಂಟರ್‌ಗಳ ಭಾಗವಾಗಿರುತ್ತದೆ. ಈ ಕುರಿತು ಆರ್.ಎಫ್.ಪಿ.ಯನ್ನು ಹೊರತರಲಾಗಿದೆ.

ಗಣಕೀಕೃತ ಪಹಣಿಗಳನ್ನು ಹೋಬಳಿ ಮಟ್ಟದಲ್ಲಿ ವಿತರಿಸುವ ಯೋಜನೆಯನ್ನು ಹಂತಹಂತವಾಗಿ ಪ್ರಾರಂಭಿಸಲಾಗುವುದು. ಈ ಯೋಜನೆಯು ಪ್ರಾರಂಭದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು.

ಆ) ಪ್ರಶ್ನೆ ಇಲ್ಲ.

644 (583) ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪರಿಸರ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು);

ಆ) ಬಂದಿದ್ದಲ್ಲಿ, ಪರಿಸರ ಹಾಳಾಗದಂತೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) :

ಅ) ರಾಜ್ಯದಲ್ಲಿ ಪರಿಸರ ಮಾಲಿನ್ಯವು ಕಾರ್ಖಾನೆಗಳಿಂದ ಸ್ಥಳೀಯ ಸಂಸ್ಥೆಗಳಿಂದ ಹಾಗೂ ಆರೋಗ್ಯ ಕೇಂದ್ರಗಳಿಂದ ಉತ್ಪತ್ತಿಯಾಗುವ ವಾಯು, ಜಲ ಮತ್ತು ಘನ ತ್ಯಾಜ್ಯ ವಸ್ತುಗಳಿಂದ ಉಂಟಾಗುತ್ತಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯದ ಪ್ರಮುಖ ನದಿಗಳಿಂದ ಪ್ರತಿ ತಿಂಗಳು 65 ಸ್ಥಳಗಳಲ್ಲಿ ನೀರಿನ ಮಾದರಿಗಳನ್ನು ಸಂಗ್ರಹಿಸಿ ಗುಣಮಟ್ಟವನ್ನು ಅಳೆಯುತ್ತಿದೆ. ಇದಲ್ಲದೆ ಕೈಗಾರಿಕೆಗಳಿಂದ ಉತ್ಪತ್ತಿಯಾಗುವ ಜಲ ಮತ್ತು ವಾಯು ಮಾಲಿನ್ಯಕ್ಕೆ ಸಂಬಂಧಿಸಿದಂತೆ ಕಾರ್ಖಾನೆಗಳನ್ನು ಸ್ಥಾಪನೆ ಮಡುವ ಸಂದರ್ಭದಲ್ಲಿ ಜಲ ಮಾಲಿನ್ಯ ನಿಯಂತ್ರಣಕ್ಕೆ ಶುದ್ಧೀಕರಣ ಘಟಕಗಳನ್ನು ಅಳವಡಿಸಲು ಸೂಕ್ತ ಷರತ್ತುಗಳನ್ನು ವಿಧಿಸಿ ಪರವಾನಿಗೆ ನೀಡಲಾಗುತ್ತಿದೆ. ಕಾರ್ಖಾನೆಗಳು ಸ್ಥಾಪನೆಗೊಂಡ ಮೇಲೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಚಾಲನಾ ಸಮ್ಮತಿ ಪತ್ರವನ್ನು ನೀಡಬೇಕಾಗಿರುತ್ತದೆ. ಈ ಚಾಲನಾ ಸಮ್ಮತಿ ಪತ್ರಗಳನ್ನು ನೀಡುವುದಕ್ಕೆ ಮೊದಲು ಸ್ಥಾಪನ ಸಮ್ಮತಿ ಪತ್ರದಲ್ಲಿ (NOC) ವಿಧಿಸಿರುವ ಷರತ್ತುಗಳನ್ನು ಪರಿಪಾಲಿಸಿರುವ ಬಗ್ಗೆ ತನಿಖೆ ಕೈಗೊಂಡ ಮೇಲೆ ಚಾಲನಾ ಸಮ್ಮತಿ ಪತ್ರವನ್ನು ನೀಡಲಾಗುತ್ತಿದೆ. ಚಾಲನಾ ಸಮ್ಮತಿ ನೀಡಿದ ಮೇಲೆ ಶುದ್ಧೀಕರಣ ಘಟಕಗಳು ಸರಿಯಾದ ರೀತಿಯಲ್ಲಿ ಕಾರ್ಯವನ್ನು ನಿರ್ವಹಣೆ ಬಗ್ಗೆ ಹಾಗೂ ಮಂಡಳಿಯು ವಿಧಿಸಿದ ಗುಣಮಾನಕಗಳಿಗೆ ... ಕಲುಷಿತ ನೀರನ್ನು ಶುದ್ಧೀಕರಿಸಲಾಗುತ್ತಿದೆ ಎಂಬುದನ್ನು ತನಿಖೆಯ ಸಂದರ್ಭವು ಗಮನಿಸಲಾಗುವುದು ಉಲ್ಲಂಘನೆ ಕಂಡುಬಂದು ಇಂತಹ ಕಾರ್ಖಾನೆಗಳ ಮೇಲೆ ಕಾನೂನು ಅಡಿಯಲ್ಲಿ ಸೂಕ್ತ ಕ್ರಮವನ್ನು ಜರುಗಿಸಲಾಗುವುದು.

ಶುದ್ಧೀಕರಿಸಿದ ನೀರನ್ನು ಮರುಬಳಸಲು ಹಾಗೂ ವ್ಯವಸಾಯ ಅಥವಾ ತೋಟಗಾರಿಕೆಗೆ ಉಪಯೋಗಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನೀಡುವ ಪರವಾನಿಗೆಯಲ್ಲಿ ಷರತ್ತುಗಳನ್ನು ವಿಧಿಸಿ ನಿರ್ದೇಶನಗಳನ್ನು ನೀಡುತ್ತಿದೆ.